## ವಿವೇಕಪ್ರಭ ಪತ್ರಿಕೆಯ ಚಂದಾವಿವರ

**ಬಿಡಿ ಪ್ರತಿ:** ರೂ.10; **ವಾರ್ಷಿಕ:** ರೂ 100 ;
**ಮೂರು ವರ್ಷ:** ರೂ.250; **ಆಜೀವ (25 ವರ್ಷ):** ರೂ.1500;
**ಪೋಷಕ ಸಹಾಯಧನ :** ರೂ.3000 ಅಥವಾ ಹೆಚ್ಚು
**ವಿದೇಶಗಳಿಗೆ: (ಏರ್‌ಮೇಲ್):** **ವಾರ್ಷಿಕ:** $15;
**ಮೂರುವರ್ಷ:** $45; **ಆಜೀವ (25 ವರ್ಷ):** $300;
**ಪೋಷಕ ಸಹಾಯಧನ:** $600 ಅಥವಾ ಹೆಚ್ಚು

ಚಂದಾಹಣವನ್ನು (Sri Ramakrishna Ashrama, Viveka prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ.20 ರಿಯಾಯತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

# ಓದುಗರ ಪ್ರತಿಕ್ರಿಯೆ

**ವಿ**ವೇಕಪ್ರಭದ ಜನವರಿ ೨೦೧೦ ರ ವಿಶೇಷ ಸಂಚಿಕೆಯ ಪುಟ ೯೪ ರಲ್ಲಿ ಉಲ್ಲೇಖವಾಗಿರುವ ಕೆಲವು ಮಾಹಿತಿಗಳು ತಪ್ಪಿನಿಂದ ಕೂಡಿವೆ. ಅದರ ಎರಡನೆಯ ಪ್ಯಾರಾದಲ್ಲಿ ಕೆಲವು ಸ್ವಾಮಿಗಳನ್ನು ಹೆಸರಿಸಿ ಅವರನ್ನು 'ಕರ್ನಾಟಕ ಮತ್ತು ವಿದೇಶಗಳಲ್ಲೂ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರವನ್ನು ಮಾಡುತ್ತಿರುವ ಸಂನ್ಯಾಸಿಗಳಲ್ಲಿ ಪ್ರಮುಖರು' ಎಂದು ಉಲ್ಲೇಖಿಸಲಾಗಿದೆ. ಅದು ಸರ್ವಥಾ ಸರಿಯಲ್ಲ ಎಂದು ಈ ಮೂಲಕ ತಿಳಿಸಲು ಇಚ್ಛಿಸುತ್ತೇನೆ. ಮೊಟ್ಟ ಮೊದಲಿಗೆ ಕರ್ನಾಟಕದಿಂದ ವಿದೇಶಕ್ಕೆ ತೆರಳಿ ಭಾವಪ್ರಚಾರ ಮಾಡಿದವರು ತುಮಕೂರು ಜಿಲ್ಲೆಯ ಮಾದಿಹಳ್ಳಿಯ ಸ್ವಾಮಿ ಓಂಕಾರಾನಂದಜಿ ಅವರು. ಅನಂತರ ವಿದೇಶದಲ್ಲಿ ಭಾವಪ್ರಚಾರ ಕಾರ್ಯವನ್ನು ಮಾಡಿದವರೆಂದರೆ ಪಾವಗಡದ ಸ್ವಾಮಿ ಜಪಾನಂದಜಿ ಅವರು. ಈ ಅಂಶವನ್ನು ಈ ಬರಹದ ಲೇಖಕರೂ ಆಗಿರುವ ಸಂಪಾದಕರು ಗಮನಿಸಬೇಕಾಗಿತ್ತು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಅದಲ್ಲದೆ, ಭಾವಪ್ರಚಾರವನ್ನು ಕೈಗೊಂಡವರಲ್ಲಿ ಕೆಲವರನ್ನು ಮಾತ್ರ ಪ್ರಮುಖರು ಎಂದು ತಾವು ಗುರುತಿಸಿದ್ದು ಸರಿಯಲ್ಲ. ಹಾಗೆ ಮಾಡಿದರೆ, ಇತರರ ಕೊಡುಗೆಯನ್ನು ಕಡೆಗಣಿಸಿದಂತಾಗುತ್ತದೆ. **–ಸ್ವಾಮಿ ನಿರ್ಮಲಾನಂದ, ಅಧ್ಯಕ್ಷರು, ರಾಮಕೃಷ್ಣ ವಿವೇಕಾನಂದ ಆಶ್ರಮ, ಮಂಡ್ಯ ಮತ್ತು ಮಧುಗಿರಿ.**

**ಈ ಬರಹದಲ್ಲಿ ಕೆಲವರ ಹೆಸರುಗಳನ್ನು ಎತ್ತಿತೋರಿಸಿರುವುದರಲ್ಲಿ ಯಾವ ಪೂರ್ವಾಗ್ರಹವೂ ಇಲ್ಲ. ಹಾಗೆ ಮಾಡಿದ್ದರಿಂದ, ಇತರರ ಕೊಡುಗೆಯು ಕಡಿಮೆಯೆಂದು ಅರ್ಥವಲ್ಲ. ಈ ವಿಚಾರದಲ್ಲಿ ವಿಭಿನ್ನ ದೃಷ್ಟಿಕೋನಗಳಿಗೆ ಆಸ್ಪದವಿದೆ. ಅದನ್ನು ವಿವೇಕಪ್ರಭವು ಗೌರವಿಸುತ್ತದೆ. ಇದರಿಂದ ಯಾರಿಗಾದರೂ ಮನಸ್ಸಿಗೆ ನೋವಾಗಿದ್ದಲ್ಲಿ, ಅದಕ್ಕಾಗಿ ಕ್ಷಮೆ ಕೋರುತ್ತೇವೆ. –ಸಂ.**

ಜನವರಿ ೨೦೧೦ ರ ವಿವೇಕಪ್ರಭ ಪತ್ರಿಕೆಯ 'ಆಧ್ಯಾತ್ಮಿಕ ಕರ್ನಾಟಕ' ಎಂಬ ಹೆಸರಿನ ವಿಶೇಷ ಸಂಚಿಕೆ ಕೈಸೇರಿ ತುಂಬಾ ಸಂತೋಷವಾಯಿತು. ಈ ಸಂಚಿಕೆಯ ಎಲ್ಲಾ ಲೇಖನಗಳೂ ವಿಚಾರಪೂರ್ಣವಾಗಿವೆ, ಅಭ್ಯಸನೀಯವಾಗಿವೆ ಹಾಗೂ ಉಪಯುಕ್ತವಾಗಿವೆ. ಮುದ್ರಣ, ವಿನ್ಯಾಸ ಎಲ್ಲವೂ ಸೊಗಸಾಗಿದೆ. **– ಎಸ್. ಚನ್ನಪ್ಪ, ಮೈಸೂರು**

**ನಾ**ನು ವಿವೇಕಪ್ರಭವನ್ನು ಮೂರು ವರ್ಷಗಳಿಂದ ಓದುತ್ತ ಇದ್ದೇನೆ. ಮುತ್ತುರತ್ನಗಳಂಥ ವಿಚಾರಗಳನ್ನು ಒಳಗೊಂಡ ಇದರ ಸಂಚಿಕೆಗಳನ್ನು ಜೋಪಾನವಾಗಿ ಇಟ್ಟಿದ್ದೇನೆ. ಈ ಪತ್ರಿಕೆಯು ಈಗಿನ ಯುವಪೀಳಿಗೆಯ ದಾರಿದೀಪವಾಗಿದೆ. ಈ ಪತ್ರಿಕೆಯು ನೂರು ವರ್ಷಗಳನ್ನು ತಲುಪಲಿ ಎಂದು ಶುಭಕೋರುತ್ತೇನೆ. ಸಂಪಾದಕ ಮಂಡಲಿಯ ಎಲ್ಲ ಸದಸ್ಯರಿಗೂ ಶುಭ ಹಾರೈಸುತ್ತೇನೆ. **– ಜಿ.ಬಿ.ಗುರುಶಾಂತಪ್ಪ, ದಾವಣಗೆರೆ**

'ವಿವೇಕಪ್ರಭ' ಪತ್ರಿಕೆಯು ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಇದರಿಂದ ಬಹಳ ಜನರಿಗೆ, ಅದರಲ್ಲೂ ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗುತ್ತಿದೆ. ನನಗಂತೂ ವಿವೇಕಪ್ರಭ ಅಚ್ಚುಮೆಚ್ಚಿನದಾಗಿದೆ. ನಾನು ಒಬ್ಬ ಬಡವಿದ್ಯಾರ್ಥಿ. ಇದು ನನ್ನ ಮೊದಲ ಅನಿಸಿಕೆ ಪತ್ರ. **– ರಾಜೀವ ಕುಮಾರ ಪೂಜಾರ್, ಮಾಗಳ, ಹೂವಿನಹಡಗಲಿ ತಾಲೋಕು, ಬಳ್ಳಾರಿ ಜಿಲ್ಲೆ**

**ರಾ**ಮಕೃಷ್ಣ ಮಹಾಸಂಘದ ಏಕೈಕ ಮಾಸಪತ್ರಿಕೆಯಾದ ವಿವೇಕಪ್ರಭದ ಜನವರಿ ಸಂಚಿಕೆಯು ನಮ್ಮ ಮನೆಗೆ ತಲುಪಿತು. ಅದನ್ನು ನೋಡಿ ತುಂಬಾ ಸಂತೋಷವಾಯಿತು. ಇದು ಸಂಗ್ರಹಯೋಗ್ಯವಾದಂತಹ ವಿಶೇಷ ಸಂಚಿಕೆಯಾಗಿದೆ. ದಾರ್ಶನಿಕರ, ದಾಸಪರಂಪರೆಯ ಹಾಗೂ ಪ್ರೇಕ್ಷಣೀಯ ಸ್ಥಳಗಳೆಲ್ಲದರ ಸಂಪೂರ್ಣ ಮಾಹಿತಿಯೊಂದಿಗೆ ಇದು ನಮಗೆಲ್ಲ ಹೊಸ ಹುಮ್ಮಸ್ಸನ್ನೂ ಹುರುಪನ್ನೂ ನೀಡಿದೆ.

ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕವಾಗಿ ಐನೂರು ವರ್ಷಗಳು ತುಂಬಿದ ಸಂದರ್ಭದಲ್ಲಿ, ಹಂಪೆಯ ಪ್ರಸಿದ್ಧ ಕಲ್ಲಿನ ರಥದ ಚಿತ್ರದ ಮುಖಪುಟ ಅತ್ಯಂತ ಪ್ರಸ್ತುತವಾಗಿದ್ದು, ಸೊಗಸಾಗಿ ಮೂಡಿಬಂದಿದೆ. ಶಿವಸ್ವರೂಪರಾದ ಸ್ವಾಮಿ ವಿವೇಕಾನಂದರ ಕರ್ನಾಟಕದ ನಂಟನ್ನು ನೆನಪಿಸುವಂಥ ಬೆಳಗಾವಿ, ಸ್ವರ್ಗದಂತಹ ಸ್ಥಳ. ಜೈನಧರ್ಮದ ವಿಶಿಷ್ಟ ಕ್ಷೇತ್ರಗಳು, ಅವುಗಳಲ್ಲಿನ ಬಸದಿಗಳು ಇವುಗಳ ಬಗ್ಗೆ ಅಪಾರ ಮಾಹಿತಿಯ ಖನಿ ಇದಾಗಿದೆ. **– ಶ್ರೀಮತಿ ನಿರ್ಮಲಾ ಕೆ. ಮಾನೆ, ರಾಣೆಬೆನ್ನೂರು**

**ತ**ಮ್ಮ ಮಾಸಪತ್ರಿಕೆಯಲ್ಲಿ ಶ್ರೀಮತಿ ಭಾರತಿ ಅವರ 'ಕರ್ನಾಟಕದ ವೈಷ್ಣವಕ್ಷೇತ್ರಗಳು' ಎಂಬ ಲೇಖನ (ಜನವರಿ ೨೦೧೦ ರ ಸಂಚಿಕೆ) ಚೆನ್ನಾಗಿ ಮೂಡಿಬಂದಿದೆ. ಆದರೆ ಸಂಚಿಕೆಯ ೫೩ ನೇ ಪುಟದಲ್ಲಿ ಉಲ್ಲೇಖವಾದಂತೆ ಚೀಕಲಪರಿವಿ ಗ್ರಾಮವು ಗುಂತಕಲ್ಲಿನ ಬಳಿ ಇರುವುದಿಲ್ಲ. ಅದು ಕರ್ನಾಟಕದಲ್ಲಿಯೇ ರಾಯಚೂರು ಜಿಲ್ಲೆಯ ಮಾನವಿ ತಾಲೋಕಿನಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲೆ ಇರುತ್ತದೆ. **– ಮಲ್ಲಿಕಾರ್ಜುನ ಮಳಲಿ, ರಾಣೆಬೆನ್ನೂರು**